## ಅದ್ಭುತ ಭಾರತ

ಸರಳ ಜೀವನ ವಾಹಿನಿಯಲ್ಲಿ ಬರುವ ಕಾರ್ಯಕ್ರಮ 'ಅದ್ಭುತ ಭಾರತ' ಅರ್ಥಪೂರ್ಣ ಶೀರ್ಷಿಕೆಯಿಂದ ಮನೆ ಮಂದಿ ಎಲ್ಲ ಒಟ್ಟಾಗಿ ಕುಳಿತು ನೋಡುವಂತಹದ್ದು. ಐತಿಹಾಸಿಕ ಮಹತ್ವ, ಸಂಸ್ಕೃತಿ, ಶಿಲ್ಪಕಲೆ ಎಲ್ಲವನ್ನೂ ಇತಿಹಾಸದ ಪುಟಗಳಿಂದ ಆಯ್ದು ಯಾವುದಕ್ಕೂ ಚ್ಯುತಿ ಬಾರದ ಹಾಗೆ ಕಂಡಂತೆ ಕಂಡ ಹಾಗೆ ತಿಳಿಸುವ ಕಾರ್ಯಕ್ರಮವಿದು.

—ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

## ಮನ ಗೆದ್ದ ಡ್ರಾಮಾ ಜ್ಯೂನಿಯರ್ಸ್

ಶನಿವಾರ ಮತ್ತು ರವಿವಾರ ಝೀ ಕನ್ನಡದಲ್ಲಿ ರಾತ್ರಿ 9.30 ಗಂಟೆಗೆ ಬರುವ 'ಡ್ರಾಮಾ ಜ್ಯೂನಿಯರ್' ತುಂಬಾ ಚೆನ್ನಾಗಿ ಮೂಡಿ ಬರ್ತಾ ಇದೆ. ಸಣ್ಣ ಮಕ್ಕಳು ಪ್ರತಿ ಕಂತಿನಲ್ಲಿ ಏನಾದರೊಂದು ಒಳ್ಳೆಯ ಸಂದೇಶ ಹೇಳುತ್ತಾರೆ. ಅದರಂತೆ ಮೊನ್ನೆ ನವಂಬರ್ 11 ರಂದು ಪ್ರಸಾರವಾದ ಅಶ್ವಿನಿ ಅಂಗಡಿ ಅವರ ಜೀವನದ ಪ್ರತಿಬಿಂಬದ ನಾಟಕ ಮನಮುಟ್ಟುವಂತಿತ್ತು. ಆ ಪಾತ್ರ ಮಾಡಿದ ಪುಟ್ಟ ಹುಡುಗಿಗೆ ಪ್ರೀತಿಯ ಅಭಿನಂದನೆಗಳು. ಅಶ್ವಿನಿ ಅವರು ಮಾಡಿದ ಎಲ್ಲ ಮಹತ್ಕಾರ್ಯಗಳು ಶ್ಲಾಘನೀಯ. ಅವರಿಗೆ ಕಣ್ಣಿಲ್ಲ ಎನ್ನುವ ಮಾತೇ ಇಲ್ಲ. ಆ ಸಾಧಕಿ ತನ್ನ ಅಂತಃಚಕ್ಷುಗಳಿಂದ ಏನೆಲ್ಲಾ ಗೆದ್ದಿದ್ದಾರೆ.

—ಮೇಘನಾ ಜಿ. ಜಹಗೀರದಾರ, ಧಾರವಾಡ

## ಸೌಹಾರ್ದ ಸಂಬಂಧಗಳು

'ಪದ್ಮಾವತಿ' ಧಾರಾವಾಹಿಯ ಒಂದು ದೃಶ್ಯದಲ್ಲಿ ತುಳಸಿ ಹಾಗೂ ಅವರಮ್ಮ ಬಾವಿಯಿಂದ ನೀರು ಸೇದಿ ತುಂಬಿಸುವಾಗ ಅಲ್ಲಿಗೆ ಬಂದ ಸಾಮ್ರಾಟ್, ಅವರಿಬ್ಬರನ್ನು ಕೂರಿಸಿ ತಾನು ಆ ಕೆಲಸ ಮಾಡುವುದಲ್ಲದೆ 'ನಾನೂ ನಿಮ್ಮ ಮನೆ ಮಗನಲ್ಲವೆ? ಮಾಡಿದರೆ ತಪ್ಪೇನು?' ಅಂತ ಹೇಳಿದ್ದು ತುಂಬಾ ಮೆಚ್ಚುಗೆಯ ಅಂಶ. ಸೊಸೆಯಾಗಲೀ, ಅಳಿಯನಾಗಲೀ ಮನೆಗೆ ಬಂದ ಮೇಲೆ ನಮ್ಮ ಮನೆ ಮಕ್ಕಳೇ ಆಗ್ತಾರೆ ಅಂತ ಮನಸಾರೆ ಸ್ವೀಕರಿಸಿ ಬಿಟ್ಟರೆ ಎಲ್ಲಾ ಸಂಬಂಧಗಳು ಸೌಹಾರ್ದಯುತವಾಗೇ ಇರಬಹುದು ಅಂತ ಸಂದೇಶ ಕೊಟ್ಟಿದ್ದು ಇಷ್ಟವಾಯ್ತು.

—ಶಕುಂತಲ ರೆಡ್ಡಿ, ರಾಯಾಪುರ

ವಾರದ ಪತ್ರ

## ಪೂರ್ವ ನಿರ್ಧಾರಿತ

'ಬಿಗ್ ಬಾಸ್' ಕಾರ್ಯಕ್ರಮದ ಘಟನೆಗಳು, ಸಂಭಾಷಣೆಗಳು ಎಲ್ಲವೂ ಪೂರ್ವ ನಿರ್ಧಾರಿತವೆಂಬಂತೆ ತೋರುತ್ತಿದ್ದು, ವೀಕ್ಷಿಸಲು ಆಸಕ್ತಿ ಇಲ್ಲವಾಗುತ್ತಿದೆ. ಕೆಳಗಿನ ವಿಚಾರಗಳನ್ನು ಓದಿದಾಗ ಹಾಗೆನಿಸದೆ ಇರದು.

1. ಎಲ್ಲಾ ಕಡೆ ಕ್ಯಾಮೆರಾ ಇರುವುದು ಗೊತ್ತಿದ್ದೂ ಆಂಡ್ರೂ ಅವರು ಫ್ರಿಜ್‌ನಿಂದ ಚಾಕೊಲೇಟ್ ಕದಿಯುತ್ತಾರೆ.
2. ಇದೇ ದೃಶ್ಯ ಹಿಂದಿಯ 'ಬಿಗ್ ಬಾಸ್'ನಲ್ಲೂ ಕಂಡು ಬಂದಿದೆ. (ಅಲ್ಲಿ ಮೂರು ಸ್ಪರ್ಧಿಗಳು ಕದ್ದಿದ್ದರು).
3. ಸ್ನೇಹಾ ಆಚಾರ್ಯ ಅವರ ಮದುವೆ ನಿಶ್ಚಿತಾರ್ಥವಾಗಿದ್ದು, ನವೆಂಬರ್ ಕೊನೆಗೆ ಮದುವೆ ಜರುಗಲಿದ್ದರೂ ಬಿಗ್ ಬಾಸ್ ಸ್ಪರ್ಧಿಯಾಗಿ ಬರುತ್ತಾರೆ. ಅವರು ಒಳ ಬರುವ ವೇಳೆಗಾಗಲೇ ಆಮಂತ್ರಣ ಪತ್ರಿಕೆ ಹಂಚುವುದೂ, ಛತ್ರ ನಿಗದಿಪಡಿಸುವುದೂ ಇತರೆ ಎಲ್ಲಾ ಕಾರ್ಯಗಳು ಅರ್ಧಂಬರ್ಧ ಮುಗಿದಿರುವುದಿಲ್ಲವೆ?
5. ವೀಕ್ಷಕರು ಯಾರನ್ನು ಉಳಿಸಲು ಎಷ್ಟು ಮತ ಹಾಕಿದರು ಎಂಬುದನ್ನು ಪಾರದರ್ಶಕವಾಗಿ ತೋರಿಸಲು ಏನಾದರೂ ಅಡೆತಡೆಗಳಿವೆಯೆ? ಇಲ್ಲದಿದ್ದರೆ ಹೊರಹೋಗಲು ನಾಮ ನಿರ್ದೇಶನವಾದ ಎಲ್ಲರಿಗೂ ಬಂದ ಓಟುಗಳ ಲೆಕ್ಕ ತೋರಿಸಬಾರದೇಕೆ?

—ಬಿ.ಬಿ. ನೀಲಕಂಠಪ್ಪ, ಹಾಸನ

## ಮೀಸೆಧಾರಿ ಪುರುಷ ಪಾತ್ರಧಾರಿಗಳು

ಬಹುತೇಕ ಕನ್ನಡ ಧಾರಾವಾಹಿಗಳಲ್ಲಿ ನಟಿಸುವ ಪುರುಷ ಪಾತ್ರಧಾರಿಗಳು ಬಗೆ ಬಗೆ ವಿನ್ಯಾಸದ ಗಡ್ಡ–ಮೀಸೆಯಿಂದ ಕಾಣಿಸಿಕೊಳ್ಳುತ್ತಿದ್ದಾರೆ. ಈ ರೀತಿ ಕಾಣಿಸಿಕೊಳ್ಳುವವರು ಯುವ ಅವಿವಾಹಿತ ಪುರುಷ ಪಾತ್ರಧಾರಿಗಳು ಎನ್ನುವುದು ಗಮನಾರ್ಹ.

ಸಿನಿಮಾದ ಜೊತೆಗೆ ಕ್ರಿಕೆಟಿನ ಪ್ರಭಾವ ಈ ರೀತಿ ಗಡ್ಡ ಬಿಡಲು ಕಾರಣವಿರಬಹುದು. ಆದರೆ ಗಡ್ಡ ವಿನ್ಯಾಸಗಳು ಎಲ್ಲಾ ಯುವ ಪಾತ್ರಧಾರಿಗಳಿಗೆ ಚೆನ್ನಾಗಿ ಕಾಣಿಸುತ್ತಿಲ್ಲ. ಪಾತ್ರಧಾರಿಗಳು ಸೂಕ್ತ ಜಾಣ್ಮೆ ಉಪಯೋಗಿಸಿ ತಮಗೆ ಸರಿಹೊಂದುವ ವಿನ್ಯಾಸವನ್ನು ಮಾಡುವುದು ಒಳಿತು. ಇದಲ್ಲದೆ ಎಲ್ಲರೂ ಗಡ್ಡ ಬಿಡುವುದರಿಂದ ನೋಡುಗರಿಗೂ ಏಕತಾನತೆ ಕಾಡುವ ಸಾಧ್ಯತೆ ಇರುತ್ತದೆ.

—ಅರುಣ್ ಕುಮಾರ್ ಎಂ.ಎ., ಬೆಳ್ತಂಗಡಿ.

## ಹೊರನಾಡಿಗ ಕನ್ನಡಿಗರಿಗೆ ಅವಕಾಶ

ಚಂದನ ಟಿ.ವಿ.ಯಲ್ಲಿ ಮೂಡಿ ಬರುವ 'ಶುಭೋದಯ ಕರ್ನಾಟಕ' ದಲ್ಲಿ 'ಎಲೆ ಮರೆಯ ಕಾಯಿಗಳ ಕಿರುಪರಿಚಯ' ಅಭಿನಂದನೀಯ. ಅದರಂತೆ ಹೊರನಾಡ ಕನ್ನಡಿಗರಿಗೊಂದು ಅವಕಾಶ ಕೊಟ್ಟಲ್ಲಿ ಅದು ಅವಿಸ್ಮರಣೀಯ.

—ಶ್ರೀನಿವಾಸ ಪದಕಿ, ಮುಂಬಯಿ

## ಕಣ್ಣೀರು ತರಿಸಿದ ಬಾಂಧವ್ಯ

ಸ್ಟಾರ್ ಸುವರ್ಣದ 'ಬ್ರಹ್ಮಗಂಟು'ನಲ್ಲಿ ಗೀತಾಳನ್ನು ಅವಹೇಳನ ಮಾಡುವುದು. ರಾಷ್ಟ್ರೀಯ ಕಬ್ಬಡಿ ಹೆಸರಿನಲ್ಲಿ ಯಾವುದೋ ಗೊತ್ತು ಗುರಿಯಿಲ್ಲದ ಮೈದಾನದಲ್ಲಿ ಆಟ ಆಡಿಸಿ ಅದನ್ನೇ ಬಂಡವಾಳ ಮಾಡಿಕೊಂಡಿರುವ ಮನೆಯ ಹಿರಿಯರು, ಆಗಾಗ ಮನೆಯಿಂದ ಕಾಣೆಯಾಗುವ ಕೆಲವು ನಟರು. ಸದ್ಯ ಕಾಣೆಯಾಗಿದ್ದ ವನಿತಾವಾಸು ಹಾಗೂ ಮನೆಯಿಂದ ಹೊರ ಹಾಕಿದ್ದ ಅವರ ಮಗಳ ಮಧ್ಯೆ ನಡೆಯುವ ಸಂಭಾಷಣೆ ಮನಮಿಡಿಯುವಂತಿತ್ತು.

—ಎನ್. ಎಸ್. ಚಂದ್ರಶೇಖರ್ ಬೆಂಗಳೂರು.

## ಸಪ್ಪೆ 'ಬಿಗ್‌ಬಾಸ್'

ಎರಡು ವಾರದಿಂದ 'ಕಲರ್ಸ್ ಸೂಪರ್ಸ್' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್' ಯಾವುದೇ ವಿಶೇಷ ಮನರಂಜನೆ ಇಲ್ಲದೇ, ನಿರಂತರ ಆಂಗ್ಲ ಭಾಷಾ ಬಳಕೆಯಿಂದಾಗಿ ತೀರಾ ಸಪ್ಪೆಯಾಗಿ ಮುಂದುವರಿದಿದೆ. ಸದ್ಯ ನಾವು ಕನ್ನಡ ರಾಜ್ಯೋತ್ಸವ ಆಚರಿಸುತ್ತಿರುವ ಕಾರಣ ಕನ್ನಡ ಜಾನಪದ, ಭಕ್ತಿಗೀತೆ, ಭಾವ ಗೀತೆಗಳನ್ನು ಸ್ಪರ್ಧಿಗಳಿಂದ ಹೇಳಿಸಿ ಅವರಿಂದ ಜನಪದ ಆಟಗಳನ್ನು ಆಡಿಸಿ ಮನೋರಂಜಕವಾಗಿ ಮಾಡಬೇಕಾಗಿ ಕೋರಿಕೆ.

—ನಾರಾಯಣಯಾಜಿ ಶಿರಾಲಿ

## ಕಾವ್ಯಲೋಕದ ಅನಾವರಣ

ಟಿ.ಎನ್.ಎಸ್. ನಿರ್ದೇಶನದ 'ಮಗಳು ಜಾನಕಿ'ಯಲ್ಲಿ ಕನ್ನಡ ಕಾವ್ಯಲೋಕದ ಅನಾವರಣವಾಗುತ್ತಿದೆ. ಕಥೆಗೆ ಅನುಗುಣವಾಗಿ ಕನ್ನಡದ ಖ್ಯಾತ ಕವಿಗಳ ಕವನದ ಸಾಲುಗಳನ್ನು ಓದುವ ಪರಿ ಸ್ವಾಗತಾರ್ಹ. ಮಾತ್ರವಲ್ಲದೆ ಜಾನಕಿ ಕೊಠಡಿ ಸೇರಿದಂತೆ ಹಲವು ಕಡೆ ಕನ್ನಡ ಕವಿಗಳ ಭಾವ ಚಿತ್ರಗಳನ್ನು ಬಳಸಿರುವುದು ಉತ್ತಮ. ಕಿರುತೆರೆಯ ಇತರ ಧಾರಾವಾಹಿಗಳ ನಿರ್ದೇಶಕರು ಈ ಕನ್ನಡತನ ಪ್ರಸಾರ ಅನುಸರಿಸಿದರೆ ಒಳ್ಳೆಯದು. ಧಾರಾವಾಹಿಯಲ್ಲಿನ ಎಲ್ಲರ ನಟನೆ ತೇರಿಗಿಟ್ಟ ಕಳಸ.

—ಸುರೇಶ ಅಂಗಡಿ, ಹೂವಿನಹಡಗಲಿ